ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/03/ಮಾಹಕಾ/2018

ನಿರ್ದೇಶಕರವರಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560001,
ದಿನಾಂಕ: 9-4-2018

## ಸುತ್ತೋಲೆ

**ವಿಷಯ:-** ಮಾಹಿತಿ ಹಕ್ಕು ಅಧಿನಿಯಮ 2005 ರಡಿ ದಿನಾಂಕ 1-4-2017 ರಿಂದ 31-3-2018 ರವರೆಗಿನ ವಾರ್ಷಿಕ ವರದಿಯನ್ನು ತಯಾರಿಸಿ ಕಳುಹಿಸುವ ಬಗ್ಗೆ

*****

ಮಾಹಿತಿ ಹಕ್ಕು ಕಾಯ್ದೆ 2005 ರಡಿ ಮಾರ್ಚ್ 2018 ಕ್ಕೆ ಅಂತ್ಯಗೊಂಡಂತೆ, ವಾರ್ಷಿಕ ವರದಿಯನ್ನು ಕ್ರೋಢೀಕರಿಸಿ, ಸರ್ಕಾರಕ್ಕೆ ಸಲ್ಲಿಸುವ ಸಲುವಾಗಿ ತಮ್ಮ ಸಂಸ್ಥೆಗೆ ಸಂಬಂಧಿಸಿದಂತೆ, ಮಾಹಿತಿ ಹಕ್ಕು ಅಧಿನಿಯಮ 2005 ರ ನಿಯಮ 4(1) ಎ ಮತ್ತು 4(1) ಬಿ ಯನ್ನು ಕಾಲೋಚಿತಗೊಳಿಸುವಂತೆ ಹಾಗೂ 1-4-2017 ರಿಂದ 31-3-2018 ರ ವರೆಗಿನ ವಾರ್ಷಿಕ ವರದಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ದಿ: **30-4-2018** ರೊಳಗಾಗಿ ಈ ಕಛೇರಿಗೆ ಕಳುಹಿಸಿಕೊಡಲು ತಿಳಿಸಲಾಗಿದೆ. ಸಂಸ್ಥೆಯಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಯಾವುದೇ ಅರ್ಜಿ ಸ್ವೀಕೃತಗೊಂಡಿಲ್ಲವಾದರೆ **Nil Report** ಕಳುಹಿಸುವುದು ಕಡ್ಡಾಯವಾಗಿರುತ್ತದೆ. ತಮ್ಮ ಸಂಸ್ಥೆಯ ವೆಬ್ ಸೈಟ್ನಲ್ಲಿ 4(1)ಎ ಮತ್ತು 4 (1)ಬಿ ಮಾಹಿತಿಯನ್ನು ಪ್ರಕಟಿಸಿ, ಅನುಸರಣಾ ವರದಿಯನ್ನು ಸಹ ಕಳುಹಿಸಲು ಸೂಚಿಸಿದೆ.

ಆಯಾ ಸಂಸ್ಥೆಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಈ ವಿಷಯವನ್ನು ಅತಿ ತುರ್ತು ಎಂದು ಪರಿಗಣಿಸಿ ತಮ್ಮ ವೈಯಕ್ತಿಕ ಗಮನಹರಿಸಿ ವಿವರಗಳನ್ನು ಕಳುಹಿಸಿಕೊಡಲು ತಿಳಿಸಿದೆ.

ನಿರ್ದೇಶಕರು

ಇವರಿಗೆ:

1. ಪ್ರಾಚಾರ್ಯರು, ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು
2. ಪ್ರಾಚಾರ್ಯರು, ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳು
3. ಪ್ರಾಚಾರ್ಯರು, ಎಲ್ಲಾ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು.
4. ಇ-ಆಡಳಿತ ವಿಭಾಗಕ್ಕೆ ವೆಬ್‌ಸೈಟ್ ನಲ್ಲಿ ಪ್ರಚುರಪಡಿಸಲು.